ಊರುಗಳ ಪಟ್ಟಿಯಂನ್ನು ಮಾಡಿ ಕೇಂದ್ರ ಸರಕಾರಕ್ಕೆ ಪತ್ರ ಬರೆದಿದ್ದೇವೆ. ಕೇಂದ್ರ ಸರಕಾರದವರು ಐದು ಪತ್ರವನ್ನು ಬರೆದು ನಾವು ಕಳಿಸಿದಂತಹ ೧೪ ಸ್ಥಳಗಳ ಪೈಕಿ ೭ ಸ್ಥಳಗಳನ್ನು ಬದಲಾವಣೆ ಮಾಡಿ ಇಂತಹ ಕಡೆಗಳಲ್ಲಿ ಮಾಡಬೇಕೆಂದು ಪತ್ರ ಬರೆದಿದ್ದಾರೆ ನಾವು ಕಳಿಸಿದಂತಹ ಪತ್ರದಲ್ಲಿ ತರೀಕೆರೆ, ಶಹಾಪುರ ಎರಡೂ ಸೇರಿತ್ತು. ಯಾವ ಆಧಾರದ ಮೇಲೆ ಬದಲಾವಣೆ ಮಾಡಿದ್ದಾರೆಯೋ ಗೊತ್ತಿಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ ಹೊಳಕಲ್ಲೂರು, ಬೆಂಗಳೂರು ನಗರದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಕೋಲಾರದಲ್ಲಿ ಶ್ರೀನಿವಾಸ ಪುರ, ಬೆಳಗಾವಿಯಲ್ಲಿ ಚಿಕ್ಕೋಡಿ ಧಾರವಾಡದ ಬ್ಯಾಡಗಿ, ಬಿಜಾಪುರದಲ್ಲಿ ಬಿಜಾಪುರ ನಗರ, ಉತ್ತರ ಕನ್ನಡದಲ್ಲಿ ಕಾರವಾರ. ಮೈಸೂರು ಸಿಟ್ಟಿಯಲ್ಲಿ ಚಾಮರಾಜ ನಗರ, ಚಿಕ್ಕಮಗಳೂರಿನಲ್ಲಿ ತರೀಕೆರೆ, ಶಿವಮೊಗ್ಗದಲ್ಲಿ ಶಿಕಾರಿಪುರ, ಗುಲ್ಬರ್ಗದಲ್ಲಿ ಶಹಾಪುರ, ರಾಯಚೂರಿನಲ್ಲಿ ಮಾನ್ವಿ, ಬಳ್ಳಾರಿಯಲ್ಲಿ ಹೂವಿನ ಹಡಗಲಿ ತಾಲ್ಲೂಕು, ಈ ಊರುಗಳ ಪಟ್ಟಿಯನ್ನು ಮಾಡಿ ನಾವು ಬರೆದಂ ಕಳಿಸಿದ್ದೇವೆ ಅದರಲ್ಲಿ ೭ ಅನ್ನು ಬದಲಾವಣೆ ಮಾಡಿ ಎಂದು ಬರೆದಿದ್ದಾರೆ ಅದರಲ್ಲಿ ಹೊಳಕಲ್ಲೂರು, ಚಿಕ್ಕೋಡಿ, ಧಾರವಾಡದ ಬ್ಯಾಡಗಿ. ಶಿವಮೊಗ್ಗದ ಶಿಕಾರಿಪುರ. ರಾಯಚೂರಿನ ಮಾನ್ವಿ ಈ ಊರುಗಳು ಅದರಲ್ಲಿ ಸೇರಿವೆ. ಇವುಗಳನ್ನು ಬದಲಾವಣೆ ಮಾಡಬೇಕೆಂದು ಪತ್ರ ಬರೆದಿದ್ದಾರೆ. ಇದೊಂದು ಆಜ್ಞೆ ಅಲ್ಲ. ಕೇಂದ್ರ ಸರಕಾರದ ಅಧಿಕಾರಿಗಳ ಜೊತೆಯಲ್ಲಿ ನಮ್ಮ ಸರಕಾರದ ಅಧಿಕಾರಿಗಳು ಮಾತನಾಡಿದ್ದಾರೆ. ಅಧಿವೇಶನದ ನಂತರ ನಾನು ದೆಹಲಿಗೆ ಹೋದಂತಹ ಸಂದರ್ಭದಲ್ಲಿ ನಾನೂ ಕೂಡ ಇದರ ಬಗ್ಗೆ ಮಾತನಾಡಿ ನಾವು ಕಳಿಸಿರತಕ್ಕಂತಹ ೧೪ ಪಟ್ಟಿ ಅವರು ಹೇಳಿರತಕ್ಕಂತಹ ೭ ಎಲ್ಲವನ್ನೂ ಸೇರಿಸಿ ಈ ೨೧ಕ್ಕೂ ಮಂಜೂರಾತಿ ಪಡೆಯಲಿಕ್ಕೆ ಪ್ರಯತ್ನ ಮಾಡುತ್ತೇನೆ ಇದನ್ನು ಪ್ರಾರಂಭ ಮಾಡಬೇಕಾದರೆ ಅಂಗನವಾಡಿ ಕಾರ್ಯಕರ್ತೆಯರಿಗೆ ತರಬೇತಿ ಕೊಡಬೇಕಾಗುತ್ತದೆ. ಅಕ್ಟೋಬರ್ ಸಮೆಬರ್‌ನಲ್ಲಿ ಇದರ ಮಂಜೂರಾತಿ ಮಾಡುವ ನಿರ್ಧಾರವನ್ನು ತೆಗೆದುಕೊಂಡ ಮೇಲೆ ಡಿಸೆಂಬರ್‌ನಲ್ಲಿ ತರಬೇತಿಯನ್ನು ಪ್ರಾರಂಭ ಮಾಡುತ್ತೇವೆ. ಇನ್ನು ಸ್ಪೆಷಲ್ ನ್ಯೂಟ್ರಿಷನ್ ಪ್ರೋಗ್ರಾಂ ಬಗ್ಗೆ ಹೇಳಿದ್ದೀರಿ. ಒಂದು ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಇದನ್ನು ತೆಗೆದು ಕೊಳ್ಳುವುದಕ್ಕಾಗುವುದಿಲ್ಲ ಇಡೀ ರಾಜ್ಯದಲ್ಲಿ ಇದನ್ನು ತೆಗೆದುಕೊಳ್ಳಬೇಕಾಗುತ್ತದೆ. ಸರಕಾರದ ಹಣಕಾಸಿನ ಸ್ಥಿತಿಯು ಕೂಡ ಇದರಲ್ಲಿ ಅವಲಂಬಿಸಿರುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು...

ಅಧ್ಯಕ್ಷರು.— ಮಾನ್ಯ ಯಡಿಯೂರಪ್ಪನವರೇ, ನಾವು ಕುಳಿತುಕೊಳ್ಳಿ. ನಾನು ಯಾರಿಗೂ ಅವಕಾಶ ಕೊಡುವುದಿಲ್ಲ. ನಿಮಗೆ ಕೊಟ್ಟರೆ ಬೇರೆಯವರಿಗೂ ಕೊಡಬೇಕಾಗುತ್ತದೆ. ನೀವು ಮಾತ ನಾಡಿದ್ದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ,— ನಾವು ಜನರಿಂದ ಆರಿಸಿ ಬಂದಿರುತ್ತೇವೆ ಒಂದು ಪ್ರಶ್ನೆಗೆ ಕ್ಲಾರಿಫಿಕೇಷನ್ ಕೇಳಲಿಕ್ಕೆ ಅವಕಾಶ ಕೊಡದಿದ್ದರೆ ಹೇಗೆ? ನಾವು ಇಲ್ಲಿ ಏಕೆ ಇರಬೇಕು? ನಾನು ಹೊರಗಡೆ ಹೋಗುತ್ತೇನೆ.

(ಮಾನ್ಯ ಸದಸ್ಯರು ಸದನದಿಂದ ಹೊರಕ್ಕೆ ಹೋದರು)

ವಿಶೇಷ ಘಟಕ ಯೋಜನೆಯ ಹಣವನ್ನು ಜಿಲ್ಲಾ ಪರಿಷತ್ತಿಗೆ ವರ್ಗಾಯಿಸುವುದು.

೩೦೩೩. ಶ್ರೀ ಟಿ. ಸಿ. ಮಂಜಿಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವೆ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಶೇಷ ಘಟಕ ಯೋಜನೆಗೆ ನಿಗದಿಪಡಿಸಿದ ಪೂರ್ಣ ಮೊತ್ತವನ್ನು ಇಲಾಖೆಗಳು ಪೂರ್ಣವಾಗಿ ಬಳಸಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಉತ್ತಮ ಪರಿಣಾಮಕ್ಕಾಗಿ ವಿಶೇಷ ಘಟಕ ಯೋಜನೆಯ ಪೂರ್ಣ ಮೊತ್ತವನ್ನು ಜಿಲ್ಲಾ ಪರಿಷತ್ತುಗಳಿಗೆ ವರ್ಗಾಯಿಸುವುದನ್ನು ಸರ್ಕಾರ ಪರಿಗಣಿಸುವುದೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡೆಗಳ ಸಚಿವರು). —

ಅ) ಹೌದು.

ಆ) ವಿಶೇಷ ಘಟಕ ಯೋಜನೆಯ ಗುಂಪುಗೂಡಿಸಿದ ಸಂಪೂರ್ಣ ಮೊತ್ತವನ್ನು ಜಿಲ್ಲಾ ಪರಿಷತ್ತುಗಳಿಗೇ ವರ್ಗಾಯಿಸಲಾಗಿದೆ. ರಾಜ್ಯ ವಲಯದ ಕೆಲವು ಕಾರ್ಯಕ್ರಮಗಳ ಮೊತ್ತವು ಸಾಂಕೇತಿಕ ವಾಗಿದ್ದು, ಜಿಲ್ಲಾ ಪರಿಷತ್ತುಗಳಿಗೆ ವರ್ಗಾಯಿಸುವುದು ಸಾಧ್ಯವಿರುವುದಿಲ್ಲ.

ಶ್ರೀ ಪಿ. ಸಿ. ಮುನಿಸ್ವಾಮಪ್ಪ. —ಮಾನ್ಯ ಅಧ್ಯಕ್ಷರೆ, ವಿಶೇಷ ಘಟಕ ಯೋಜನೆಯ ಹಣವನ್ನು ಕೆಲವು ಇಲಾಖೆಗಳು ಅಂದರೆ ಕೃಷಿ ಇಲಾಖೆ, ಪಶುಸಂಗೋಪನೆ, ಮೀನುಗಾರಿಕೆ, ತೋಟಗಾರಿಕೆ, ಅರಣ್ಯ ಇಲಾಖೆ, ಇನ್ನೂ ಅನೇಕ ಇಲಾಖೆಗಳವರು ವಿಶೇಷ ಘಟಕ ಯೋಜನೆಯ ಹಣವನ್ನು ಖರ್ಚು ಮಾಡದೇ ಉಳಿಸಿಕೊಂಡಿರುವ ಅಧಿಕಾರಿಗಳ ಮೇಲೆ ಮಂತ್ರಿಗಳು ಕ್ರಮ ತೆಗೆದು ಕೊಳ್ಳುತ್ತಾರೆಯೇ ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಇಲಾಖೆಯ ಅಧಿಕಾರಿಗಳ ಮೇಲೆ ಅಷ್ಟೇ ಅಲ್ಲ, ಅದಕ್ಕೆ ಸಂಬಂಧ ಪಟ್ಟ ಎಲ್ಲರ ಮೇಲೂ ಕ್ರಮ ತೆಗೆದುಕೊಳ್ಳುತ್ತೇನೆ. ಈ ವಿಚಾರದ ಬಗ್ಗೆ ಮಾನ್ಯ ಬಸವಲಿಂಗಪ್ಪ ನವರು ಎತ್ತಿದಂಥ ಸಂದರ್ಭದಲ್ಲಿ ನಾನು ವಿವರವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಅದರ ಬಗ್ಗೆ ಸವಿೂಕ್ಷೆ ಮಾಡುತ್ತೇವೆ. ಸ್ಪೆಷಲ್ ಕಾಂಪೋನೆಂಟ್ ಸ್ಕೀಮಿನಲ್ಲಿ ಜಿಲ್ಲಾಪರಿಷತ್‌ಗೆ ಕೊಟ್ಟಿರತಕ್ಕ ಸ್ಕೀಮ್ ಜಾಸ್ತಿ ಇದೆ. ಅದನ್ನು ಇಂಪ್ಲಿಮೆಂಟ್ ಮಾಡಿದರೆ ಸಾಕು. ಉಳಿದಿರುವುದನ್ನು ಕೊಡುವ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು.—ಮಾನ್ಯ ಎನ್. ಹೆಚ್. ಗೌಡರ ಪೂರಕ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಸಮಯ ಕೇಳಿದ್ದಾರೆ.

ಶ್ರೀ ಎನ್.ಹೆಚ್. ಗೌಡ.—ಅಧ್ಯಕ್ಷರೆ, ನನಗೆ ನಿರ್ದಿಷ್ಟವಾದ ಅಂಕಿ ಸಂಖ್ಯೆಗಳು ಬೇಕಾಗಿಲ್ಲ. ಸಾಮಾನ್ಯವಾಗಿ, ಪರೋಕ್ಷವಾಗಿ ಉತ್ತರ ಕೊಟ್ಟರೆ ಸಾಕು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಅಧ್ಯಕ್ಷರೇ, ಈ ಪ್ರಶ್ನೆಯ ಬಗ್ಗೆ ಎಲ್ಲಾ ತಾಲ್ಲೂಕುವಾರುಗಳಿಂದ ವಿವರಗಳನ್ನು ತರಿಸಬೇಕಾಗುತ್ತದೆ. ನಾನು ಇದರ ಬಗ್ಗೆ ಅಧಿಕಾರಿಗಳ ಜೊತೆ ಮಾತನಾಡಿ ಆ ದಿನಾಂಕ ವನ್ನು ಅವರಿಗೆ ತಿಳಿಸುತ್ತೇನೆ.

ಅಧ್ಯಕ್ಷರು —ಇಷ್ಟರೊಳಗೆ ತಾರೀಖಿನೊಳಗೆ ಉತ್ತರ ಬರಲಿಲ್ಲ ಅಂದರೆ ನಿಮ್ಮ ಊರಿಗೆ ಉತ್ತರವನ್ನು ಕಳುಹಿಸಿಕೊಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಅಧ್ಯಕ್ಷರೇ, ಸಾಧ್ಯವಾದರೆ, ಅಧಿವೇಶನದ ಒಳಗಡೆಯೇ ಉತ್ತರ ಕೊಡುತ್ತೇನೆ.

ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಪರಿಸ್ಥಿತಿಯ ಬಗ್ಗೆ

೩೮೯. **ಶ್ರೀ ಆರ್.ಎನ್. ನಾಯ್ಕ** (ಭಟ್ಕಳ).—ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು ?

ಆ) ಕಳೆದ ವರ್ಷದಿಂದ ಈ ತನಕ ಪ್ರತಿ ತಾಲೂಕಿನಲ್ಲಿ ಎಷ್ಟು ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗಿದೆ ?

ಇ) ಎಷ್ಟು ಪಸತಿ ನಿಲಯಗಳಿಗೆ ಸ್ವಂತ ಕಟ್ಟಡ ಇದೆ ?